

ಅರುಣ ಪಿ. ಭಟ್ಟ

## ವಾರಭವಿಷ್ಯ: 11.3.2021ರಿಂದ 17.3.2021ರವರೆಗೆ




ಬಹುದಿನದಿಂದ ನಿರೀಕ್ಷಿಸಿದ ಮಕ್ಕಳ ಕೆಲಸದ ಸಮಸ್ಯೆ ಬಗೆಹರಿಯುವುದು. ಸರ್ಕಾರದಿಂದ ಬರುವ ಹಣ ಸಕಾಲಕ್ಕೆ ಬರುವುದು. ಸಂಘ ಸಂಸ್ಥೆಗಳಿಂದ ನೀವು ನಿರೀಕ್ಷಿಸಿದ ಕೆಲಸ ಕಾರ್ಯಗಳು ನೆರವೇರುತ್ತವೆ. ಉದ್ಯಮಿಗಳು ಮತ್ತು ವ್ಯಾಪಾರಸ್ಥರಿಗೆ ಉತ್ತಮ ಲಾಭ. ವಾರಾಂತ್ಯದಲ್ಲಿ ಅನಿರೀಕ್ಷಿತ ಜನವಿರೋಧ ಎದುರಾಗುವ ಸಾಧ್ಯತೆ ಇದೆ. ಶುಭದಿನ 15. ಆದಿತ್ಯ ಹೃದಯ ಪಠಿಸಿರಿ.




ವಾಹನ ಖರೀದಿಯಲ್ಲಿ ಜಾಗ್ರತೆ ವಹಿಸಿರಿ. ಬಹುದಿನದ ಸಾಮಾಜಿಕ ಸ್ಥಾನಮಾನದಲ್ಲಿ ಪ್ರಗತಿ ಸಾಧಿಸುವಿರಿ. ಲೇಖಕರಿಗೆ ಶುಭವಾರ್ತೆ ಸಿಗಲಿದೆ. ಆರೋಗ್ಯದಲ್ಲಿ ಸುಧಾರಣೆ ಆಗಲಿದೆ. ವಿವಾಹಾಪೇಕ್ಷಿಗಳಿಗೆ ಉತ್ತಮ ಅವಕಾಶ. ಹೊಸಮನೆ ಕೆಲಸಗಳು ಅಭಾದಿತವಾಗಿ ನಡೆಯುತ್ತದೆ. ವಾರಾಂತ್ಯದಲ್ಲಿ ಹೊಸ ಕೆಲಸದ ಆಲೋಚನೆ ಮಾಡುವ ಸಾಧ್ಯತೆ ಇದೆ. ಶುಭದಿನ 14. ವಿಷ್ಣು ಸಹಸ್ರನಾಮ ಸ್ತೋತ್ರ ಪಠಿಸಿರಿ.




ವಾರದ ಪ್ರಾರಂಭದಲ್ಲಿ ಕಾಲುನೋವು ಉಲ್ಬಣಗೊಳ್ಳುವುದು. ನೆಂಟರ ಆಗಮನದಿಂದ ಮಹತ್ವದ ಚರ್ಚೆ ನಡೆಯಲಿದ್ದು ಉದ್ದೇಶ ಫಲಪ್ರದವಾಗಲಿದೆ. ಸಹೋದರ ವರ್ಗದ ನೈಜಮುಖದ ಪರಿಚಯವಾಗುವುದು. ಕೆಲಸದವರಿಂದ ಸಹಾಯ ಸಿಗಲಿದೆ. ಖರೀದಿ ವಿಕ್ರಿಯಲ್ಲಿ ಹೆಚ್ಚಿನ ಲಾಭ ಸಿಗಲಿದೆ. ಶುಭದಿನ 12.ನಾಗ ಪ್ರತಿಮಾ ಪೂಜೆ ಮಾಡಿರಿ.




ಅಸಭ್ಯರ ಪ್ರವೇಶದಿಂದ ನಿಮ್ಮ ಕುಟುಂಬದಲ್ಲಿ ಕಿರಿಕಿರಿ ಉಂಟಾಗಲಿದೆ. ತಂದೆ ಮಕ್ಕಳ ನಡುವೆ ಮನಸ್ತಾಪ ತಲೆದೂರುವ ಸಾಧ್ಯತೆ ಇದೆ. ವಾಹನ ದುರಸ್ತಿ ಕಾರ್ಯ ಇಲ್ಲವೆ ವಾಹನ ಬದಲಾಯಿಸುವ ಯೋಗ ಇದೆ. ಕೃಷಿಮೂಲದಿಂದ ಧನಲಾಭ ಅಧಿಕವಾಗಲಿದೆ. ನಿಮ್ಮ ವ್ಯಕ್ತಿತ್ವದಿಂದ ಸಾಮಾಜಿಕ ಮನ್ನಣೆ ಯಶಸ್ಸು ಸಿಗಲಿದೆ. ಶುಭದಿನ 17. ಲಕ್ಷ್ಮೀ ನರಸಿಂಹ ಸ್ತೋತ್ರ ಪಠಿಸಿರಿ.




ವಾರದ ಪ್ರಾರಂಭದಲ್ಲಿ ಮಾನಸಿಕ ಸ್ವಾಸ್ಥ್ಯ ಕೆಡುವ ಘಟನೆಗಳು ಜರುಗುವ ಅಪಾಯ ಇದೆ. ಹೊಟ್ಟೆ ನೋವಿನ ಉಪದ್ರವ ಕಾಡಲಿದೆ. ಸಾಮಾಜಿಕವಾಗಿ ಅವಮಾನವನ್ನು ಉಂಟು ಮಾಡಬಹುದಾದಂತಹ ಸಂದರ್ಭ ಎದುರಾಗಬಹುದು. ಸ್ವಲ್ಪ ಎಚ್ಚರಿಕೆಯನ್ನು ತೆಗೆದುಕೊಳ್ಳಬೇಕು. ದೈಹಿಕ ಆರೋಗ್ಯ ಚೆನ್ನಾಗಿರುವುದು. ಅಧಿಕಾರಿಗಳಿಂದ ಪ್ರಶಂಸೆ. ಶುಭದಿನ 14. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಖರ್ಚುಗಳು ಹೆಚ್ಚಾಗಲು ಹಲವು ಕಾರಣಗಳು ಒಂದಾದ ಮೇಲೆ ಒಂದರಂತೆ  ಬರಲಿವೆ. ಅನಿರೀಕ್ಷಿತ ಪ್ರವಾಸ ಕೈಗೊಳ್ಳುವ ಸಾಧ್ಯತೆ ಎದುರಾಗಲಿದೆ. ಆಪ್ತರ ವಿವಾಹ ಕಾರ್ಯಕ್ಕೆ ನೆರವಾಗುವದರಿಂದ ಸಂತಸ ಪ್ರಾಪ್ತಿ ಆಗಲಿದೆ. ಆಳುಕಾಳುಗಳು ಕೈಕೊಡಬಹುದು. ಕೌಟುಂಬಿಕ ಸುವಾರ್ತೆ ಲಭಿಸಲಿದೆ. ಶುಭದಿನ 16. ಲಕ್ಷ್ಮೀ ನಾರಾಯಣ ಹೃದಯ ಪಠಿಸಿರಿ.




ವಿವಿಧ ಮೂಲಗಳಿಂದ ಧನಲಾಭ ಪ್ರಾಪ್ತವಾಗಲಿದೆ. ಜೀವನದ ಮಹತ್ವಾಕಾಂಕ್ಷೆ ಪೂರ್ಣಗೊಳ್ಳುವ ಸಮಯ ನಿಮ್ಮ ಪಾಲಿಗೆ ಬರುತ್ತದೆ. ಹಳೆಯ ಮಿತ್ರರು ಜೊತೆಯಾಗುವರು. ಸಂತಸ ಸಮಾರಂಭಕ್ಕಾಗಿ ಖರ್ಚು ಮಾಡುತ್ತೀರಿ. ಹೊಸ ವಿವಾಹಿತರಿಗೆ ಸಂತಾನ ಪ್ರಾಪ್ತಿಯ ಸೂಚನೆ ಸಿಗಲಿದೆ. ಶುಭದಿನ 11. ಸುಬ್ರಹ್ಮಣ್ಯ ಸ್ವಾಮಿಗೆ ಕ್ಷೀರಾಭಿಷೇಕ ಮಾಡಿರಿ.




ಹಲವು ದಿನಗಳಿಂದ ಬಯಸಿದ ಅಧಿಕಾರ ನಿಮಗೆ ಸಿಗಲಿದೆ. ಇದರಿಂದ ನಿಮ್ಮ ಸಂತಸ ಹೆಚ್ಚಾಗುವ ಮೂಲಕ ಸಾರ್ಥಕ ಭಾವನೆ ಮೂಡಲಿದೆ. ವಿಶೇಷ ವಸ್ತ್ರ ಖರೀದಿ ಸಾಧ್ಯತೆ ಇದೆ. ಕ್ರೀಡಾಪಟುಗಳಿಗೆ ಉತ್ತಮ ಅವಕಾಶಗಳು ಸಿಗಲಿವೆ. ಕೌಟುಂಬಿಕ ಖರ್ಚು ಹಿಡಿತಕ್ಕೆ ಬರುವುದು. ನೀವು ಕೈಗೊಳ್ಳುವ ಚಿಕ್ಕ ಪ್ರವಾಸದಿಂದ ಮನೋಲ್ಲಾಸವಾಗಲಿದೆ. ಶುಭದಿನ 14. ಶನಿಸ್ತೋತ್ರ ಪಠಿಸಿರಿ.




ಬಂಧುಗಳ ಸಹಕಾರದಿಂದ ಸಂಕಟ ಮುಕ್ತಿಯಾಗುತ್ತದೆ. ಇದು ನಿಮ್ಮನ್ನು ನಿರಾಳವಾಗಿ ಇಡಲಿದೆ. ಪತ್ನಿಯ ಮಾನಸಿಕ ಬಯಕೆಗಳು ಪೂರ್ಣವಾಗುವುದು. ದೂರಪ್ರವಾಸಕ್ಕೆ ಸಿದ್ಧತೆ ಮಾಡಿಕೊಳ್ಳಲಿದ್ದೀರಿ. ನಾಗರಿಕರಿಂದ ಪ್ರಶಂಸೆಯ ನುಡಿ ಕೇಳಿಬರಲಿವೆ. ನಾಗರಿಕ ಸನ್ಮಾನ ಸಿಗಲಿದೆ. ಸರಕಾರಿ ನೌಕರರಿಗೆ ವರ್ಗಾವಣೆ ಸಾಧ್ಯತೆ ಇದೆ. ಶುಭದಿನ 15. ಕಾಲಭೈರವನ ಸೇವೆ ಮಾಡಿರಿ.




ಹಲವು ತಾಪತ್ರೆಯಗಳ ನಡುವೆಯೂ ಹಮ್ಮಿಕೊಂಡ ಕಾರ್ಯವನ್ನು ಮಾಡಿ ಮುಗಿಸುವಿರಿ. ಈ ಮೂಲಕ ನಿಮ್ಮನ್ನು ವಿರೋಧಿಸುತ್ತಿದ್ದವರ ಮನದಲ್ಲೂ ಕೂಡ ಸಂತಸ ಸಂಭ್ರಮವನ್ನುಂಟು ಮಾಡುತ್ತದೆ. ಸಹನೆಯಿಂದ ಕೆಲ ಸ್ಥಳಗಳಲ್ಲಿ ವಿಶೇಷ ಜನಪ್ರಿಯತೆಯನ್ನು ಗಳಿಸುವಿರಿ. ಹಾಗಾಗಿ ಬರಬೇಕಾಗಿದ್ದ ಹಣವು ಶೀಘ್ರದಲ್ಲಿ ದೊರೆಯುವುದು. ಶುಭದಿನ 13. ಆಂಜನೇಯ ಸ್ತೋತ್ರವನ್ನು ತಪ್ಪದೆ ಪಠಿಸಿ.




ಮಕ್ಕಳೊಂದಿಗೆ ಸಮಯ ಕಳೆಯುವುದು ಮುಖ್ಯ. ಒಂದೇ ಒಂದು ಉತ್ತಮ ಕೆಲಸದಿಂದ ನಿಮ್ಮ ಶತ್ರುಗಳೂ ನಿಮ್ಮ ಸ್ನೇಹಿತರಾಗಬಹುದು. ನೀವು ಸಾಕಷ್ಟು ಆಸಕ್ತಿದಾಯಕ ಆಮಂತ್ರಣಗಳನ್ನು ಪಡೆಯುತ್ತೀರಿ. ಇದರ ಜೊತೆಗೆ ಒಂದು ಅಚ್ಚರಿಯ ಕೊಡುಗೆಯೂ ನಿಮಗೆ ಸಿಗಬಹುದು. ನಿಮ್ಮ ಸಂಗಾತಿ ನಿಮ್ಮ ಒಂದು ಯೋಜನೆಯನ್ನು ಹಾಳುಮಾಡಬಹುದು; ತಾಳ್ಮೆ ಕಳೆದುಕೊಳ್ಳಬೇಡಿ. ಶುಭದಿನ 15. ಹನುಮಾನ್ ಚಾಲೀಸ್ ಓದಿರಿ.




ನಿಮ್ಮ ವೃತ್ತಿ ಜೀವನದ ಬಗ್ಗೆ ಸಾಕಷ್ಟು ಗಂಭೀರ ಯೋಜನೆಯನ್ನು ಮಾಡುವಿರಿ. ಏನಾದರೂ ವಿಶೇಷವಾದುದನ್ನು ಸಾಧಿಸುವಿರಿ. ನಿಮ್ಮ ಆರ್ಥಿಕ ಪರಿಸ್ಥಿತಿ ಸುದಾರಿಸುತ್ತದೆ ಆದರೆ ನಿಮ್ಮ ಖರ್ಚುಗಳು ಜಾಸ್ತಿಯಾಗುವ ಸಾಧ್ಯತೆಯಿರುತ್ತದೆ. ಸ್ನೇಹಿತರು ನಿಜವಾಗಿಯೂ ಈ ಸಂದರ್ಭದಲ್ಲಿ ಸಹಾಯ ಮಾಡುವರು. ಸಮಾಜದಲ್ಲಿ ನಿಮ್ಮ ಪ್ರತಿಷ್ಠೆ ಹೆಚ್ಚಾಗುವುದು. ಶುಭದಿನ 14. ರಾಘವೇಂದ್ರ ಸ್ವಾಮಿಗಳ ಆರಾಧನೆ ಮಾಡಿರಿ.